# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 662 |
| ಸದಸ್ಯರ ಹೆಸರು | : | ಶ್ರೀ. ಶಾಂತರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಮಾನ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 13-12-2024. |

******

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಪೋಕ್ಸೋ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 02 ವರ್ಷಗಳಲ್ಲಿ ಜಿಲ್ಲೆಯಲ್ಲಿ ದಾಖಲಾಗಿರುವ ಪೋಕ್ಸೋ ಪ್ರಕರಣಗಳು ಎಷ್ಟು; ಅದನ್ನು ತಡೆಗಟ್ಟಲು ಸರ್ಕಾರ ತಗೆದುಕೊಂಡ ಕ್ರಮಗಳೇನು; ಮತ್ತು ಅಪರಾಧಿಗಳಿಗೆ ವಿಧಿಸುವ ಶಿಕ್ಷೆಗಳಾವವು;</td><td>ಉತ್ತರ ಕನ್ನಡ ಜಿಲ್ಲೆಯಲ್ಲಿ ಪೋಕ್ಸೋ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಳೆದ 02 ವರ್ಷಗಳಲ್ಲಿ ಜಿಲ್ಲೆಯಲ್ಲಿ ದಾಖಲಾಗಿರುವ ಪೋಕ್ಸೋ ಪ್ರಕರಣಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.
<table>
<tr><th>ವರ್ಷ</th><th>ಪೋಕ್ಸೋ ಪ್ರಕರಣಗಳ ಸಂಖ್ಯೆ</th></tr>
<tr><td>2022-23</td><td>67</td></tr>
<tr><td>2023-24</td><td>81</td></tr>
</table>
ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಲು ಪತ್ರಿಕೆಗಳು ಮತ್ತು ವಿವಿಧ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ ಹಾಗೂ ಪೋಕ್ಸೋ ಕಾಯ್ದೆಯ ಕುರಿತಂತೆ ಅಧಿಕಾರಿ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಐ.ಇ.ಸಿ ಕಾರ್ಯಕ್ರಮಗಳ ಮೂಲಕ ಶಾಲಾ ಕಾಲೇಜುಗಳಲ್ಲಿ ಮತ್ತು ಇತರ ವೇದಿಕೆಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.<br><br>ಪೋಕ್ಸೋ ಕಾಯ್ದೆ 2012ರ ಅಡಿ ಅಪರಾಧಿಗಳಿಗೆ ವಿಧಿಸಬಹುದಾದ ಶಿಕ್ಷೆಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಶಾಲಾ ಮಟ್ಟದಲ್ಲಿ ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಲು ಪಾಲಕರ ಜೊತೆ ಜಾಗೃತಿ ಕಾರ್ಯಾಗಾರಗಳು ಮುಂತಾದ ಕಾರ್ಯಕ್ರಮಗಳ ಯೋಜನೆಗಳನ್ನು ರೂಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸುವುದೇ;?(ವಿವರಿಸುವುದು)</td><td>ಮಕ್ಕಳ ಮೇಲಿನ ಲೈಂಗಿನ ದೌರ್ಜನ್ಯ ಕುರಿತಂತೆ ಶಾಲಾ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಪ್ರಸ್ತುತ ಹಮ್ಮಿಕೊಳ್ಳಲಾಗುತ್ತಿದೆ.<br><br>ಉತ್ತರ ಕನ್ನಡ ಜಿಲ್ಲಾದ್ಯಾಂತ ಒಟ್ಟು 109 ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಪೋಕ್ಸೊ ಕಾಯ್ದೆ ಕುರಿತಂತೆ ಜಾಗೃತಿ ಕಾರ್ಯಕ್ರಮಗಳನ್ನು 2023-24 ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿದೆ ಒಟ್ಟು 7944 ಮಕ್ಕಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.<br><br>ಆಕಾಶವಾಣಿ ಮೂಲಕ ವಾತ್ಸಲ್ಯವಾಣಿ ಎಂಬ ಸರಣಿ ಕಾರ್ಯಕ್ರಮವನ್ನು ಪ್ರಸ್ತಾರ ಮಾಡಲಾಗುತ್ತಿದ್ದು,</td></tr>
</table>

| | | |
|---|---|---|
| | | ಈ ಕಾರ್ಯಕ್ರಮದಲ್ಲಿ ಪೋಕ್ಸೋ ಕಾಯ್ದೆ ಕುರಿತು ಮಾನ್ಯ ಇಲಾಖಾ ಸಚಿವರು, ಇಲಾಖೆ ಕಾರ್ಯದರ್ಶಿಗಳು, ನಿರ್ದೇಶಕರು ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿ ಜಾಗೃತಿ ಮೂಡಿಸಿದ್ದಾರೆ.<br><br>ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಕುರಿತು ಮಾನ್ಯ ಇಲಾಖಾ ಸಚಿವರ ಸಂದೇಶವನ್ನು ಆಕಾಶವಾಣಿ ಮೂಲಕ ದಿ:16.09.2024 ರಿಂದ 15.10.2024 ರ ವರೆಗೆ ಪ್ರಸಾರ ಮಾಡಲಾಗಿದೆ. |

ಮಮಇ 189 ಮಭಾಬ 2024

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

# ಅನುಬಂಧ

## POCSO ಕಾಯಿದೆಯಡಿ ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ವಿರುದ್ಧ ವಿಧಿಸಲಾಗುವ ಅಪರಾಧ ಮತ್ತು ದಂಡನೆಗಳು:

| ಅಪರಾಧಕ್ಕೆ ಸಂಬಂಧಿಸಿದ ಪೋಕ್ಸೋ ಕಾಯ್ದೆಯಡಿ ಸೆಕ್ಷನ್ | ಮಕ್ಕಳ ಮೇಲೆ ಎಸಗುವ ಅಪರಾಧ | ಶಿಕ್ಷೆಗೆ ಸಂಬಂಧಿಸಿದ ಪೋಕ್ಸೋ ಕಾಯ್ದೆಯಡಿ ಸೆಕ್ಷನ್ | ಸಂಬಂಧಿಸಿದ ಅಪರಾಧಗಳಿಗೆ ವಿಧಿಸಲಾಗುವ ಶಿಕ್ಷೆ |
|---|---|---|---|
| ಸೆಕ್ಷನ್ 3 | ಮಕ್ಕಳ ಮೇಲೆ ಭೇದಕ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲಿ | ಸೆಕ್ಷನ್ 4 | ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದು. ಇದು ಜೀವಾವಧಿ ಶಿಕ್ಷೆಯವರೆಗೂ ವಿಸ್ತರಿಸಬಹುದು.<br><br>ಒಂದು ವೇಳೆ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನ ಮೇಲೆ ಲೈಂಗಿಕ ಆಕ್ರಮಣ ಎಸಗಿದ್ದಲ್ಲಿ, ಇಪ್ಪತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಾರಾಗೃಹ ವಾಸದ ಶಿಕ್ಷೆಗೆ ಗುರಿಯಾಗುತ್ತಾರೆ ಮತ್ತು ಅದು ಜೀವಾವಧಿ ಶಿಕ್ಷೆಯಾಗಿ ವಿಸ್ತರಣೆಯಾಗಬಹುದು. |
| ಸೆಕ್ಷನ್ 5 | ಒಂದು ವೇಳೆ ಭೇದಕ ಲೈಂಗಿಕ ದೌರ್ಜನ್ಯವನ್ನು ಪೊಲೀಸ್ ಅಧಿಕಾರಿಗಳು, ಶಿಕ್ಷಕರು ಇನ್ನಿತರೆ ಸರ್ಕಾರಿ ಅಧಿಕಾರಿಗಳು ಅಥವಾ ಮಕ್ಕಳ ಪಾಲನೆ, ಪೋಷಣೆಯ ಜವಾಬ್ದಾರಿ ಇರುವವರು ಎಸಗಿದ್ದಲ್ಲಿ ಅದನ್ನು ತೀವ್ರ ಬೇಧಕ ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಲಾಗುತ್ತದೆ. | ಸೆಕ್ಷನ್ 6 | ಇಂತಹ ಪ್ರಕರಣಗಳಲ್ಲಿ ಇಪ್ಪತ್ತು ವರ್ಷಗಳಿಗಿಂತಲೂ ಕಡಿಮೆಯಿಲ್ಲದ ಅವಧಿಗೆ ಕಠಿಣ ಕಾರಾಗೃಹ ವಾಸದ ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ. ಇದು ಜೀವಾವಧಿ ಯವರೆಗೂ ಮುಂದುವರಿಯಬಹುದು ಮತ್ತು / ಅಥವಾ ಮರಣದಂಡನೆಯನ್ನೂ ಸಹ ವಿಧಿಸಬಹುದಾಗಿದೆ. |
| ಸೆಕ್ಷನ್ 7 | ಲೈಂಗಿಕ ಉದ್ದೇಶದಿಂದ ಮಕ್ಕಳ ಖಾಸಗಿ ಅಂಗಗಳನ್ನು ಮುಟ್ಟುವುದು ಅಥವಾ ಮಕ್ಕಳಿಂದ ಬೇರೆಯವರು ಮುಟ್ಟಿಸಿ ಕೊಳ್ಳುವುದು ಅಥವಾ ಮುಟ್ಟುವಂತೆ ಮಾಡುವುದು. ಅಂದರೆ ಲೈಂಗಿಕ ಉದ್ದೇಶದಿಂದ ಸಂಭೋಗ ಹೊರತುಪಡಿಸಿ | ಸೆಕ್ಷನ್ 8 | ಈ ರೀತಿ ತೊಂದರೆ ಮಾಡುವವರಿಗೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ, ಐದು ವರ್ಷದವರೆಗೂ ಕಾರಾಗೃಹ ವಾಸದ ಶಿಕ್ಷೆ ಮತ್ತು ದಂಡವನ್ನೂ ವಿಧಿಸಲಾಗುತ್ತದೆ. |

| | | | |
|---|---|---|---|
| | ಮಕ್ಕಳ ದೇಹವನ್ನು ಸ್ಪರ್ಶಿಸಿದರೆ ಅದನ್ನು ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸ ಲಾಗುವುದು. | | |
| ಸೆಕ್ಷನ್ 9 | ಈ ಮೇಲೆ ಹೇಳಿದಂತಹ ಅಪರಾಧಗಳನ್ನು ಸರ್ಕಾರಿ ಅಧಿಕಾರಿಗಳು ಅಥವಾ ಮಕ್ಕಳ ಆರೈಕೆ ಮತ್ತು ಮಕ್ಕಳನ್ನು ರಕ್ಷಿಸುವ ಜವಾಬ್ದಾರಿ ಹೊಂದಿರುವ ವ್ಯಕ್ತಿಗಳು ಮಾಡಿದ್ದಲ್ಲಿ, ಅದನ್ನು ತೀವ್ರ ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಲಾಗುವುದು. | ಸೆಕ್ಷನ್ 10 | 5 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳವರೆಗೂ ಮುಂದುವರೆಸುವ ಕಾರಾಗೃಹವಾಸ ಶಿಕ್ಷೆ ಹಾಗೂ ದಂಡವನ್ನೂ ಕೂಡ ವಿಧಿಸಬಹುದಾಗಿದೆ. |
| ಸೆಕ್ಷನ್ 11 | ಲೈಂಗಿಕ ಉದ್ದೇಶದಿಂದ ಪದಗಳನ್ನು ಬಳಸುವುದು ಮತ್ತು ಶಬ್ದ ಮಾಡುವುದು. ಅಭಿನಯ, ಸನ್ನೆ ಇನ್ನಿತರೆ ಚಟುವಟಿಕೆಗಳನ್ನು ಮಾಡಿದಲ್ಲಿ ಲೈಂಗಿಕ ಕಿರುಕುಳವೆಂದು ಪರಿಗಣಿಸಲಾಗುವುದು. | ಸೆಕ್ಷನ್ 12 | ಮೂರು ವರ್ಷಗಳವರೆಗೂ ಜೈಲು ಶಿಕ್ಷೆ ಹಾಗೂ ದಂಡವನ್ನು ವಿಧಿಸಬಹುದು. |
| ಸೆಕ್ಷನ್ 13 | ಮಕ್ಕಳನ್ನು ಲೈಂಗಿಕ ಚಿತ್ರಗಳ ತಯಾರಿಗೆ ಬಳಸಿದರೆ ಮತ್ತು ಮಕ್ಕಳ ಲೈಂಗಿಕ ಚಿತ್ರ ತೆಗೆದಿಟ್ಟುಕೊಳ್ಳುವುದನ್ನು ಅಪರಾಧ ಎಂದು ಪರಿಗಣಿಸಲಾಗುವುದು. | ಸೆಕ್ಷನ್ 14 | ಐದು ವರ್ಷಗಳವರೆಗೂ ಶಿಕ್ಷೆ ಮತ್ತು ದಂಡ ವಿಧಿಸಬಹುದು. ಏಳು |
| ಸೆಕ್ಷನ್ 15 | ಮಕ್ಕಳನ್ನು ಒಳಗೊಂಡಿರುವ ಅಶ್ಲೀಲ ಚಿತ್ರಗಳನ್ನು ಯಾರೇ ಆಗಲಿ ಕೊಳ್ಳುವುದು ಅಪರಾಧವೆಂದು ಪರಿಗಣಿಸ ಲಾಗುವುದು | ಸೆಕ್ಷನ್ 15 (3) | ಮೊದಲ ಬಾರಿಯ ಅಪರಾಧಕ್ಕೆ ಮೂರರಿಂದ ಐದು ವರ್ಷ ಕಾರಗೃಹ ಶಿಕ್ಷೆ ಅಥವಾ ದಂಡ ಸಹಿತ ಅಥವಾ ಎರಡು.<br><br>ಎರಡನೇ ಬಾರಿಯ ಅಪರಾಧಕ್ಕೆ ಐದರಿಂದ ಏಳು ವರ್ಷಗಳವರೆಗೂ ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ. |
| ಸೆಕ್ಷನ್ 16 | ಲೈಂಗಿಕ ಅಪರಾಧಗಳನ್ನು ಮಾಡಲು ಯಾರಾದರೂ ಯಾರಿಗಾದರೂ ನೆರವು ನೀಡುವುದು ಅಪರಾಧವಾಗುತ್ತದೆ. | ಸೆಕ್ಷನ್ 17 | ಎಸಗಿದ ಅಪರಾಧ ಎಂತಹದ್ದಾಗಿರು ತ್ತದೋ, ಅದಕ್ಕೆ ಯಾವ ಶಿಕ್ಷೆ ವಿಧಿಸಲಾಗುತ್ತದೋ, ಅಷ್ಟೇ ಶಿಕ್ಷೆಯ ನ್ನು ನೆರವು ನೀಡಿದವರಿಗೂ ವಿಧಿಸ ಲಾಗುತ್ತದೆ. |

| | | | |
|---|---|---|---|
| ಸೆಕ್ಷನ್ 18 | ಈ ಮೇಲೆ ತಿಳಿಸಿರುವ ಯಾವುದೇ ಲೈಂಗಿಕ ಅಪರಾಧವನ್ನು ಎಸಗಲು ನಡೆಸಿದ ಪ್ರಯತ್ನವೂ ಅಪರಾಧವಾಗುತ್ತದೆ. | ಸೆಕ್ಷನ್ 18 | ಕನಿಷ್ಠ ಒಂದೂವರೆ ವರ್ಷ ಕಾರಾಗೃಹ ಶಿಕ್ಷೆ ಮತ್ತು ದಂಡ. ಅದು ಅತಿ ದೀರ್ಘಾವಧಿ ಅಥವಾ ಜೀವಾವಧಿ ಶಿಕ್ಷೆಯೂ ಆಗಬಹುದು |
| ಸೆಕ್ಷನ್ 21 | ಮಕ್ಕಳ ಮೇಲೆ ಆಗಿರಬಹುದಾದ ಲೈಂಗಿಕ ಅಪರಾಧದ ಬಗ್ಗೆ ಮಾಹಿತಿ ಇರುವವರು ಪೊಲೀಸ್ ದೂರು ನೀಡದಿರುವುದು ಸಹ ಅಪರಾಧ ಎಂದು ಪರಿಗಣಿಸಲಾಗುವುದು. | ಸೆಕ್ಷನ್ 21 (1) | ಆರು ತಿಂಗಳ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಎರಡು. |
| ಸೆಕ್ಷನ್ 22 | ಮಕ್ಕಳ ಮೇಲೆ ಲೈಂಗಿಕ ಶೋಷಣೆ ಆಗಿದೆ ಎಂದು ಸುಳ್ಳು ದೂರು ನೀಡಲು ಮನವೊಲಿಸುವ ಅಥವಾ ಒತ್ತಾಯ ಮಾಡುವ ವಯಸ್ಕರಿಗೆ. | ಸೆಕ್ಷನ್ 22 | ಆರು ತಿಂಗಳ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಎರಡು. |